ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಮಡಿಕೇರಿ-ಕಡಮಕಲ್-ಸುಬ್ರಹ್ಮಣ್ಯ ರಸ್ತೆ ಗ್ರಾಮಾಂತರ ರಸ್ತೆಯಾಗಿರುವುದರಿಂದ 33 ಕಿಲೋ ಮೀಟರ್ ಉದ್ದದ ಈ ರಸ್ತೆಯಲ್ಲಿ ಈಗಾಗಲೇ 13 ಕಿಲೋಮೀಟರ್ ರಸ್ತೆಯನ್ನು ಸುಧಾರಣೆ ಮಾಡಲಾಗಿದೆ. ಇನ್ನು 14 ಕಿಲೋಮೀಟರ್ ರಸ್ತೆಗಳನ್ನು ಸುಧಾರಣೆ ಮಾಡುವ ಸಲುವಾಗಿ ಜಲ್ಲಿಯನ್ನು ಹಾಕಿ ಕೆಲಸವನ್ನು ಮಾಡಲಾಗಿದೆ. ಇನ್ನು 18.70 ಕಿಲೋ ಮೀಟರ್‌ಷ್ಟು ರಸ್ತೆಯನ್ನು ಕಡಿದಾದ ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ರಸ್ತೆ ಇರುವುದರಿಂದ, ಅದನ್ನು ಸರ್ವೆ ಮಾಡಿ ಹಂತ ಹಂತವಾಗಿ ಅಭಿವೃದ್ಧಿ ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಮತ್ತು ವಾಹನಗಳ ಸಾಂದ್ರತೆಯನ್ನು ಸಹಿತ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇಲ್ಲಿ ವಾಹನಗಳ ಸಂಖ್ಯೆ ದ್ವಿಚಕ್ರವಾಹನಗಳು ಪ್ರತಿನಿತ್ಯ ಹೋಗುವುದು 855. ಟೆಂಪೋಗಳು 12, ಕಾರುಗಳು 258, ಬಸ್‌ಗಳು 23, ಲಾರಿಗಳು 28 ಈ ರೀತಿ ವಾಹನಗಳ ಸಾಂದ್ರತೆಯನ್ನು ಗಮನದಲ್ಲಿಟ್ಟುಕೊಂಡು ಅಂಥ ರಸ್ತೆಗಳಿಗೆ ಆದ್ಯತೆಯಲ್ಲಿ ಕೆಲಸ ಮಾಡಬೇಕು ಎಂದು ಹೇಳಿ ಹಣಕಾಸಿನ ಲಭ್ಯತೆಯನ್ನು ಗಮನದಲ್ಲಿಟ್ಟು ಕೊಂಡು ಅತ್ಯಂತ ಶೀಘ್ರದಲ್ಲಿ ಕೆಲಸ ಮಾಡುವ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಡಿ.ಎನ್. ಮಾದಪ್ಪ : ಮಾನ್ಯ ಅಧ್ಯಕ್ಷರೇ, ಇಲ್ಲಿ ರಸ್ತೆಯಾದರೆ ಖಂಡಿತವಾಗಿಯೂ ವಾಹನಗಳ ಸಾಂದ್ರತೆ ಹೆಚ್ಚುತ್ತದೆ. ಬಸ್‌ನಲ್ಲಿ ಹೋಗುವುದಕ್ಕೆ ಆಗುತ್ತಿಲ್ಲ. ಕಾರಣ 13 ಕಿಲೋ ಮೀಟರ್ ರಸ್ತೆ ತಾವು ಸರಿ ಮಾಡಿದರೆ ಖಂಡಿತವಾಗಿಯೂ ವಾಹನಗಳು ಇವತ್ತು ಮೈಸೂರಿನಿಂದ ಧರ್ಮಸ್ಥಳಕ್ಕೆ ಹೋಗಬೇಕಾದರೆ ಏನು ಸುಳ್ಯ ಮಾರ್ಗವಾಗಿ ಹೋಗುತ್ತಾರೆ, ಅದರ ಬದಲು ಈ ಕಡೆಯಿಂದಲೇ ಹೋಗಬಹುದು. ನಾನು ಆಗಲೇ ಹೇಳಿದ ಹಾಗೆ ಸುಮಾರು 50 ಕಿಲೋಮೀಟರ್ ಉಳಿಯುತ್ತೆ. ಇದರಿಂದ ತೈಲದ ಉಳಿತಾಯ, ಸಮಯದ ಉಳಿತಾಯ ಇದನ್ನು ದೃಷ್ಟಿಯಲ್ಲಿಟ್ಟಾಗ ಖಂಡಿತವಾಗಿಯೂ ತಾವು ಈ ರಸ್ತೆಗೆ ಹಣವನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಆದ್ಯತೆ ಮೇಲೆ ಪರಿಶೀಲಿಸೋಣ.

ರಾಜ್ಯದಲ್ಲಿ ಕನ್ನಡ ಭವನ ನಿರ್ಮಾಣ

442 - ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ (ಬಾಗೇಪಲ್ಲಿ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿಯ ಮಾನ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾಂಸ್ಕೃತಿಕ ಸಮುಚ್ಚಯ (ಕನ್ನಡ ಭವನ) ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಇದ್ದಲ್ಲಿ ಎಂದಿನಿಂದ ಈ ಕಾರ್ಯವನ್ನು ಪ್ರಾರಂಭಿಸಲಾಗುವುದು? ಇಲ್ಲದಿದ್ದಲ್ಲಿ ಕಾರಣಗಳೇನು?

ಇ) ಈ ಕಾರ್ಯಕ್ರಮಕ್ಕಾಗಿ ಮೀಸಲಿಟ್ಟ ಹಣವೆಷ್ಟು?

ಈ) ಮೀಸಲಿಟ್ಟ ಹಣದಲ್ಲಿ ಎಷ್ಟು ಪ್ರಗತಿ ಸಾಧಿಸಲಾಗಿದೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಇದೆ

ಆ) ಕಟ್ಟಡ ನಿರ್ಮಾಣ ಕೆಲಸ ಈಗಾಗಲೇ ಪ್ರಾರಂಭವಾಗಿದೆ.

ಇ) 1) 77 ಲಕ್ಷ ರೂ.ಗಳು ಲೋಕೋಪಯೋಗಿ ಇಲಾಖೆಯಲ್ಲಿ ಠೇವಣಿ ಇಟ್ಟಿದೆ.

2) 1997-98ನೇ ಸಾಲಿನ ಬಂಡವಾಳ ವೆಚ್ಚ ಶೀರ್ಷಿಕೆಯಲ್ಲಿ 105.00 ಲಕ್ಷ ರೂ. ಗಳ ಅವಕಾಶ ಮಾಡಿದೆ.

ಈ) 17.91 ಲಕ್ಷ ರೂ. ಗಳಷ್ಟು ಹಣ ವೆಚ್ಚವಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ಆದರೆ ಪೂರ್ಣವಾದ ಮಾಹಿತಿ ಇಲ್ಲ. ಕಟ್ಟಡದ ನಿರ್ಮಾಣದ ಕೆಲಸ ಈಗಾಗಲೇ ಪ್ರಾರಂಭವಾಗಿದೆ ಎಂದು ಹೇಳಿದ್ದಾರೆ. ಪ್ರಾರಂಭವಾಗಿದ್ದರೆ ಅದು ಯಾವ ಹಂತದಲ್ಲಿದೆ? ಯಾವ ಹಂತಕ್ಕೆ ಕೆಲಸ ಮುಗಿದಿದೆ ಎನ್ನುವುದನ್ನು ತಿಳಿಸಬೇಕು. ಈಗಾಗಲೇ 17.91 ಲಕ್ಷ ರೂಪಾಯಿಗಳಷ್ಟು ಹಣ ವೆಚ್ಚವಾಗಿದೆ ಎಂದು ಇಲ್ಲಿ ಉತ್ತರದಲ್ಲಿ ತಿಳಿಸಿದ್ದಾರೆ. ಅಷ್ಟು ಖರ್ಚಾಗಿದ್ದರೆ ಯಾವ ಹಂತಕ್ಕೆ ಅಷ್ಟು ಹಣ ಖರ್ಚಾಗಿದೆ? ಯಾವ ಹಂತದಲ್ಲಿ ಆ ಭವನದ ಕೆಲಸ ಆಗುತ್ತಿದೆ? ಕನ್ನಡ ಭವನಕ್ಕೆ ಒಟ್ಟು ಅಂದಾಜು ಎಷ್ಟು? ಮತ್ತು ಈ ಭವನದ ರೂಪರೇಷೆ, ಸ್ವರೂಪ, ಕನ್ನಡ ಭವನ ಎಂದರೆ ಈಗ ದೆಹಲಿಯಲ್ಲಿ ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್ ಎಂದು ಇದೆ. ಇಡೀ ಎಲ್ಲಾ ಚಟುವಟಿಕೆಗಳನ್ನು ಮಾಡಲಿಕ್ಕೆ ಒಂದು ಕೇಂದ್ರ ಮತ್ತು ಮಾಹಿತಿಯನ್ನು ಕೊಡುವ ಕೇಂದ್ರ, ಜಗತ್ತಿಗೆ ಸಂಬಂಧಪಟ್ಟ ಎಲ್ಲ ರೀತಿಯ ಮಾಹಿತಿಯು ಅಲ್ಲಿ ಸಿಗುತ್ತದೆ. ಅದೇ ರೀತಿಯಲ್ಲಿ ಕರ್ನಾಟಕದಲ್ಲಿ ನಿರ್ಮಾಣವಾಗುವ ಕನ್ನಡ ಭವನದ ಸ್ವರೂಪವೇನು? ರೂಪ ರೇಷೆಗಳೇನು? ಆ ರೀತಿಯಾದ ಒಂದು ಮಾದರಿಯಲ್ಲಿ ಇಡೀ ಕರ್ನಾಟಕದ ಸಂಸ್ಕೃತಿ ಮತ್ತು ಎಲ್ಲವನ್ನೂ ಎಲ್ಲಾ ರೀತಿಯಾದ ಮಾಹಿತಿಗಳನ್ನು ಕೊಡುವ ಒಂದು ಕಟ್ಟಡವಾಗಿ ಅದು ನಿರ್ಮಾಣಗೊಳ್ಳುತ್ತೆ. ಮತ್ತು ಕರ್ನಾಟಕಕ್ಕೆ ಸಂಬಂಧಪಟ್ಟ ಅಭಿವೃದ್ಧಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಕೊಡುತ್ತದೆ? ಯಾವ ಸ್ವರೂಪವನ್ನು ಅದು ಪಡೆಯುತ್ತದೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಶ್ರೀರಾಮರೆಡ್ಡಿಯವರು ಕೇಳಿರುವ ಎಲ್ಲಾ ಅಂಶಗಳೂ ಸೇರಿರುವುದೇ ಕನ್ನಡಭವನ ಎಂದು ಮೊದಲು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರಿನಲ್ಲಿ ಕನ್ನಡ ಭವನದ ಒಂದು ರಚನೆ ಮೊದಲು ನಿರ್ದೇಶನಾಲಯ, ಕನ್ನಡಕ್ಕೆ ಸಂಬಂಧಪಟ್ಟಿರುವ ಎಲ್ಲಾ ಅಕಾಡೆಮಿಗಳು, ಪುಸ್ತಕದ ಮಳಿಗೆ, ವಾಚನಾಲಯ, ಮಿನಿ ಥಿಯೇಟರ್ ಪ್ರತಿಯೊಂದಕ್ಕೂ ಹಂತ ಹಂತವಾಗಿ ನಾಲ್ಕು ಅಂತಸ್ತಿನಲ್ಲಿ ಸಮಗ್ರ ಕನ್ನಡದ ಅಭಿವೃದ್ಧಿಗೆ ಆಗಬೇಕಾದ ಕನ್ನಡ ಭವನವನ್ನು ರಚನೆ ಮಾಡುವುದಕ್ಕೆ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಇದರ ಒಟ್ಟು ವೆಚ್ಚ

690 ಲಕ್ಷ ರೂಪಾಯಿಗಳು. ಈಗಾಗಲೇ ಎರಡು ಕೋಟಿವರೆಗೂ ಆಡಳಿತಾತ್ಮಕ ಅನುಮೋದನೆಯನ್ನು ಕೂಡ ಕೊಟ್ಟಿದೆ. ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಶ್ರೀರಾಮರೆಡ್ಡಿಯವರು ದಯವಿಟ್ಟು ಸ್ವಲ್ಪ ತಮಗೆ ಸಮಯ ಇದ್ದರೆ ಹೋಗಿ ನೋಡಬಹುದು ಯಾವ ಮಟ್ಟಕ್ಕೆ ಇವತ್ತು ಕನ್ನಡ ಭವನ ಇದೆ ಎನ್ನುವುದು ಗೋತ್ತಾಗುತ್ತದೆ. ಬೇಸ್‌ಮೆಂಟ್ ಲೆವೆಲ್‌ಗೆ ಇವತ್ತು ರೂಫನ್ನು ಹಾಕುತ್ತಿದ್ದಾರೆ. ಈ ವರ್ಷದೊಳಗಾಗಿ ಬಹುಶಃ ನಮ್ಮ ಕನ್ನಡದ ನಿರ್ದೇಶನಾಲಯವನ್ನು ಅಲ್ಲಿಗೆ ತೆಗೆದುಕೊಂಡು ಹೋಗುವುದಕ್ಕೆ ನಾವು ಪ್ರಯತ್ನಮಾಡುತ್ತೇವೆ. 17 ಲಕ್ಷ ರೂಪಾಯಿ ಎನ್ನುವುದು ಕೇವಲ ಪುಸ್ತಕದಲ್ಲಿರುವುದು. 35 ರಿಂದ 40 ಲಕ್ಷ ರೂಪಾಯಿಗಳ ಕೆಲಸವಾಗಿದೆ. ಕೆಲಸ ಭರದಿಂದ ನಡೆಯುತ್ತಿದೆ. ಸ್ವಲ್ಪ ವಿಳಂಬವಾಗಿದ್ದು ಏಕೆಂದರೆ ನ್ಯಾಷನಲ್ ಗೇಮ್ಸ್‌ಗೆ ಆ ಕಂಟ್ರಾಕ್ಟರ್ ಅಲ್ಲಿ ಕಟ್ಟಡ ಕಟ್ಟಲಿಕ್ಕೆ ಸ್ಟೇಡಿಯಂ ಕಟ್ಟಲಿಕ್ಕೆ ಹೋಗಿದ್ದರಿಂದ ವಿಳಂಬವಾಗಿದೆ. ಬಹಳ ವೇಗವಾಗಿ ಇವತ್ತು ಕೆಲಸ ಪ್ರಾರಂಭ ಮಾಡಿದ್ದಾರೆ. ಮೂರು ನಾಲ್ಕು ತಿಂಗಳೊಳಗಾಗಿ ಒಂದು ಹಂತ ಮುಗಿಯುತ್ತಾ ಇದೆ. ಕನ್ನಡ ಭವನವನ್ನು ಮುಗಿಸುವುದಕ್ಕೆ ಪ್ರಯತ್ನಮಾಡುತ್ತೇವೆ. ಇದರ ಒಟ್ಟು ವೆಚ್ಚ 690 ಲಕ್ಷ ರೂಪಾಯಿಗಳು. ಎರಡು ನೂರು ಲಕ್ಷ ರೂಪಾಯಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟಿದೆ. 77 ಲಕ್ಷ ರೂಪಾಯಿಗಳನ್ನು ಇವತ್ತು ಈಗಾಗಲೇ ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಿದ್ದೇವೆ. ಇದು ಮುಗಿದ ತಕ್ಷಣ ಪುನಃ ಇವತ್ತು ನಮ್ಮ ಆಯವ್ಯಯ ಪಟ್ಟಿಯಲ್ಲಿ 155 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಅದನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಎರಡು ಕೋಟಿ ರೂಪಾಯಿಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಈಗಾಗಲೇ ಪಡೆಯಲಾಗಿದೆ ಎಂದು ಹೇಳಿದ್ದೀರಿ. ಇಲ್ಲಿ ಉತ್ತರದಲ್ಲಿ 97-98ನೇ ಸಾಲಿಗೆ ಬಂಡವಾಳ ವೆಚ್ಚ ಶೀರ್ಷಿಕೆಯಲ್ಲಿ 105 ಲಕ್ಷ ರೂಪಾಯಿಗಳಿಗೆ ಮಾತ್ರ ಅವಕಾಶ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಹಾಗಾದರೆ ಆಡಳಿತಾತ್ಮಕವಾದ ಅನುಮತಿ ಎರಡು ಕೋಟಿ ರೂಪಾಯಿಗೆ ಹೇಗೆ ಆಗುತ್ತದೆ?

ಅಧ್ಯಕ್ಷರು : ಈ ವರ್ಷಕ್ಕೆ ಅಷ್ಟು ಪ್ರಾವಿಷನ್ ಇಟ್ಟುಕೊಂಡಿದ್ದಾರೆ. ನೀವು ಮಂತ್ರಿಯಾಗಿಲ್ಲ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಈ ಕೆಲಸ ಮಾಡಲಿಕ್ಕೆ ಎರಡು ಕೋಟಿ ಚಿಲ್ಲರೆ. ಈ ವರ್ಷದ ಫೈನಾನ್ಸಿಯಲ್ ಪ್ರಾವಿಷನ್ ಮಾಡಿರುವುದು 1.05 ಕೋಟಿ ರೂಪಾಯಿ. ಈಗಾಗಲೇ ಅದರಲ್ಲಿ ಬಿಡುಗಡೆ ಮಾಡಿರುವುದು 77 ಲಕ್ಷ ರೂಪಾಯಿ. ಖರ್ಚು ಮಾಡಿರುವುದು 17 ಲಕ್ಷ. ಡಿಫರೆಂಟ್ ಸ್ಟೇಜಸ್ ಗೊತ್ತಾಯಿತಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಇದು ಹಂತ ಹಂತವಾಗಿ ಕಟ್ಟುವ ಕಟ್ಟಡ.

ಅಧ್ಯಕ್ಷರು : ಹಂತ ಹಂತವಾಗಿ ಕಟ್ಟಿ ಮುಗಿಸುವುದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಹಂತ ಹಂತವಾಗಿ ಮುಗಿಸುತ್ತಿದ್ದೇವೆ.

ಅಧ್ಯಕ್ಷರು : ಗೊತ್ತಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಂತ ಹಂತವಾಗಿ ಎಂದು ಗೊತ್ತಾಯಿತು. ಹಣಕಾಸಿನ ಪರಿಸ್ಥಿತಿ ಅಷ್ಟೇ ಕೇಳುತ್ತಿರುವುದು.

ಶ್ರೀಮತಿ ಲೀಲಾದೇವಿ. ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಹಣಕಾಸಿನ ಪರಿಸ್ಥಿತಿ ನಮಗೆ ತೊಂದರೆಯಾಗುವುದಿಲ್ಲ. ನಾವು ಮುಗಿಸುತ್ತೇವೆ.

ಕುಂದಾಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ರಸ್ತೆಗಳ ದುರಸ್ಥಿ

443 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಕೋಟೇಶ್ವರ, ಸೋಮೇಶ್ವರ ಮತ್ತು ಬಸ್ರೂರು, ಕಾಂತ್ಲೂರು, ಹೊಸಗಂಡಿ ರಸ್ತೆಗಳು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅತೀ ಹೆಚ್ಚು ವಾಹನ ಸಂಚಾರವಿರುವ ಈ ರಸ್ತೆಗಳನ್ನು ತುರ್ತು ರಿಪೇರಿಗೊಳಿಸದಿರಲು ಕಾರಣವೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಸ್ತೆಯ ಮೇಲ್ಮೈ ಹಲವು ಕಡೆಗಳಲ್ಲಿ ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಗಮನಕ್ಕೆ ಬಂದಿದೆ.

ಆ) ವಾಹನ ಸಾಂದ್ರತೆಯನ್ನು ಗಮನಿಸಿ ಅನುದಾನದ ಲಭ್ಯತೆಗೆ ಅನುಗುಣವಾಗಿ ದುರಸ್ತಿ ಮಾಡಲಾಗುವುದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ರಸ್ತೆಗಳನ್ನು ಯಾವಾಗ ನಿರ್ಮಿಸಲಾಯಿತು ಮತ್ತು ಡಾಂಬರೀಕರಣ ಮಾಡಲಾಯಿತು? ಮತ್ತು ಎಷ್ಟು ಬಾರಿ ಡಾಂಬರೀಕರಣ ಮಾಡಿದ್ದೀರಿ? ಈ ರಸ್ತೆಗಳಿಗೆ ಎಷ್ಟು ವಾಹನಗಳು ಓಡಾಡುತ್ತೆ. ವಾಹನಗಳ ಸಾಂದ್ರತೆಗನುಗುಣವಾಗಿ ನೀವು ಡಾಂಬರೀಕರಣ ಮಾಡುವ ಕಾರ್ಯಕ್ರಮವೇನಾದರೂ ಇದೆಯೇ? ಮತ್ತು ಈ ರೋಡ್ ಸರ್ಫೇಸ್ ಏನು ಇದೆ, ಅದರಿಂದ ಅರ್ಧ ಫೀಟು ಕೊರಕಲಾಗಿರುವ ರಸ್ತೆಗಳು ಇಲ್ಲಿವೆ. ಇದರಿಂದ ವಾಹನ ಸಂಚಾರಕ್ಕೆ ತುಂಬಾ ಅಡೆತಡೆಯಾಗುತ್ತದೆ. ವಾಹನಗಳು ಕೆಳಗೆ ಇಳಿಯುವುದಿಲ್ಲ ಮತ್ತು ಓವರ್‌ಟೇಕ್ ಮಾಡಲಿಕ್ಕಾಗುವುದಿಲ್ಲ. ಇದನ್ನು ಸರಿಪಡಿಸಲಿಕ್ಕೆ ತಾವು ತುರ್ತು ಕ್ರಮವೇನಾದರೂ ಕೈಗೊಂಡಿದ್ದೀರಾ?

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಕೋಟೇಶ್ವರ ಮತ್ತು ಸೋಮೇಶ್ವರ ರಸ್ತೆ ಹಾಗೂ ಬಸ್ರೂರು ಕಾಂತ್ಲೂರು ಹೊಸಂಗಣ ರಸ್ತೆ, ಈ ರಸ್ತೆಗಳ ಮೇಲೆ ವಾಹನ ಸಾಂದ್ರತೆ ಹೆಚ್ಚಾಗಲಿಕ್ಕೆ ಕಾರಣ, ಹೊನ್ನಾವರದಲ್ಲಿಯ ಶರಾವತಿ ಸೇತುವೆಯ ಮೇಲೆ ಓಡಾಟವನ್ನು ಕೆಲವು ದಿವಸಗಳ ಕಾಲ ನಿಷೇಧ ಮಾಡಿದ್ದರಿಂದ ಈ ರಸ್ತೆಯ ಮೇಲೆ ಹೆಚ್ಚಿನ ಭಾರ ಬಿದ್ದು ರಸ್ತೆ